ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸಂಖ್ಯೆ:ಎ6/ಅಸಂಕಾ/ಸಿಆರ್-34/2016-17

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ,
ದಿನಾಂಕ: 02-03-2017.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಬಳ್ಳಾರಿ ವೃತ್ತ, ಬಳ್ಳಾರಿ.

ಮಾನ್ಯರೆ,

ವಿಷಯ : ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಐಮಂಗಲ ಹಾಗೂ 37 ಇತರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ 0.8068 ಹೆಕ್ಟೇರ್ ಅರಣ್ಯ ಭೂಮಿಯನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ :
1. ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಕುನೀ&ನೈ.ವಿಭಾಗ, ಚಿತ್ರದುರ್ಗ ರವರ ಕಛೇರಿ ಪತ್ರ ಸಂಖ್ಯೆ: ಕಾಇಂ/ಗ್ರಾನೀಸ &ನೈವಿ/ಚಿವಿ/ಸಿಂ-3/ 2016-17/1218 ದಿನಾಂಕ: 07.11.2016.
2. ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲೊ ಸ್ವೀಕರಿಸಿದ ದಿನಾಂಕ:03-12-2016.
3. ವಲಯ ಅರಣ್ಯಾಧಿಕಾರಿ, ಹೊಸದುರ್ಗ ವಲಯ ಹೊಸದುರ್ಗ ಇವರ ಕಛೇರಿ ಪತ್ರ ಸಂಖ್ಯೆ:ವಅ.ಹೊದು.ಪೈಪ್‌ಲೈನ್/388/2016-17 ದಿನಾಂಕ:27.02.2017.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರ ಕಛೇರಿ ಪತ್ರ ಸಂಖ್ಯೆ:ಸಸಂ. ಹಿರಿ.ಕು.ನೀರು.ವಿವ/233/16-17 ದಿನಾಂಕ:01.03.2017.

<><><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿಯಲ್ಲಿ, ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಐಮಂಗಲ ಹಾಗೂ 37 ಇತರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ ನೀರು ಶುದ್ಧೀಕರಣವನ್ನು ಲಕ್ಕಿಹಳ್ಳಿ ರಿ.ಸ.ನಂ.16 ಮತ್ತು 17 ರ 0.7264 ವಿಸ್ತೀರ್ಣದಲ್ಲಿ ನಿರ್ಮಿಸಲು ಉದ್ದೇಶಿಸಿರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ -1980 ರ ಪ್ರಸ್ಥಾವನೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯ ಪ್ರಕಾರ ವಲಯ ಅರಣ್ಯಾಧಿಕಾರಿ ಹೊಸದುರ್ಗ ವಲಯ, ಹೊಸದುರ್ಗ ಇವರು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರುಗಳ ಸ್ಥಳ ಪರಿಶೀಲನೆ ಮಾಡಿ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಉಲ್ಲೇಖ (3) ಮತ್ತು (4) ರಲ್ಲಿ ಈ ಕಛೇರಿಗೆ ಒಪ್ಪಿಸಿರುತ್ತಾರೆ.

ಪರಿಶೀಲಿಸಲಾಗಿ ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿ, ಲಕ್ಕಿಹಳ್ಳಿ ಸರ್ವೆ ನಂಬರು.16 ಮತ್ತು 17 ರ ಪ್ರದೇಶಗಳು ಒಟ್ಟು 161.63 ಹೆಕ್ಟೇರ್ ವಿಸ್ತೀರ್ಣವಿದ್ದು ಸೆಕ್ಷನ್-4 ಘೋಷಣೆಗಾಗಿ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಒಪ್ಪಿಸಲಾಗಿರುತ್ತದೆ. ಸದರಿ ಯೋಜನೆಯು ಕುಡಿಯುವ ನೀರಿನ ಯೋಜನೆಯಾಗಿದ್ದು ಯೋಜನೆಯಿಂದ ಹಲವು ಹಳ್ಳಿಗಳಿಗೆ ನೀರಿನ ಸೌಲಭ್ಯ ದೊರಕುತ್ತದೆ.

ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿ, ಲಕ್ಕಿಹಳ್ಳಿ ಸರ್ವೆ ನಂಬರು.16 ಮತ್ತು 17 ರಲ್ಲಿ ಒಟ್ಟು–0.8068 ಹೆಕ್ಟೇರ್ ವಿಸ್ತೀರ್ಣದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿರುವುದರಿಂದ, ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಕುನೀ&ನೈ.ವಿಭಾಗ, ಚಿತ್ರದುರ್ಗ ಇವರಿಗೆ ಅರಣ್ಯ ಸಂರಕ್ಷಣಾ ಕಾಯ್ದೆಯ–1980 ರನ್ವಯ ಷರತ್ತುಗಳಿಗೆ ಬದ್ದವಾಗಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಮಂಜೂರು ಮಾಡಬಹುದೆಂದು ವರದಿ ಸಲ್ಲಿಸಿದೆ. ಸದರಿ ವಿಷಯದಲ್ಲಿ ಎಲ್ಲ ದಾಖಲೆಗಳನ್ನು ಈ ಪತ್ರದೊಂದಿಗೆ ಮುಂದಿನ ಕ್ರಮಕ್ಕಾಗಿ ಒಪ್ಪಿಸಿದೆ.

ತಮ್ಮ ನಂಬುಗೆಯ,

ಸಹಿ/–

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

<u>ಪ್ರತಿಯನ್ನು:</u>

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ), ಅರಣ್ಯ ಭವನ, ಬೆಂಗಳೂರು ಇವರ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ–ವಿಭಾಗ, ಹಿರಿಯೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ವಲಯ ಅರಣ್ಯಾಧಿಕಾರಿ, ಹೊಸದುರ್ಗ ವಲಯ ಹೊಸದುರ್ಗ ಇವರ ಮಾಹಿತಿ ಹಾಗೂ ಕ್ರಮಕ್ಕಾಗಿ ಕಳುಹಿಸಿದೆ.
4. ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಕುನೀ&ನೈ.ವಿಭಾಗ, ಚಿತ್ರದುರ್ಗ ಇವರ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

3/3/17

O/c